14		Bnagalore Rural	180- Dodda ballapur	2- Madure	2- Madure
15	Mandya	188-Melukote	8- Duda Circle II (Part) Gunayakanahalli Shivalli Beeregowdanahalli Chanagalu		Gunayakanahalli Shivalli Beeregowdanahalli Chanagalu
16		190-Shrirangapattana	190-Shrirangapattana		190-Shrirangapattana

TABLE – B

Sl No	No. & Name of the Assembly Constituency	Extent as per final Notification	Correct version of the spelling and names of Taluk, Circle and Village to read as
1	2	3	4
1	5-Gulbarga	35-Jewargi 40-Chitapur (SC)	35-Jewargi 40-Chitapur (SC
2	6-Raichur	37-Shahpur	37-Shahpur
3	27-Chikkaballapur	180- Dodda Ballapur	180- Dodda Ballapur
4	19- Tumkur	128- Chiknayakan-halli	128- Chiknayakan-halli
5	20- Mandya	190 Shrirangapattana	190 Shrirangapattana

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

ವಿಷಯ : ಲಾತೂರಿನ ರಾಜೀವ್‌ಗಾಂಧಿ ಸರ್ಕಲ್ ಬಳಿ ಛಾವಾ ಸಂಘಟನೆ ಅಧ್ಯಕ್ಷರಾದ ಶ್ರೀ ಅಣ್ಣಾಸಾಹೇಬ ಚಾವಡೆಯವರ ನೇತೃತ್ವದಲ್ಲಿ ಬಸ್ಸನ್ನು ತಡೆದು ನಿಲ್ಲಿಸಿ ಬೆಂಕಿ ಹಚ್ಚಿರುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :- ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿಯನ್ನು ಕೋರಿ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇದು ರಾಜ್ಯದಲ್ಲಿ ನಡೆದಿರತಕ್ಕಂಥ ಘಟನೆ ಅಲ್ಲ. ನಿನ್ನೆ ಲಾತೂರಿನ ರಾಜೀವ್‌ಗಾಂಧಿ ಸರ್ಕಲ್ ಬಳಿ ಛಾವಾ ಸಂಘಟನೆ ಅಧ್ಯಕ್ಷರಾದ ಅಣ್ಣಾಸಾಹೇಬ ಚಾವಡೆ ಅವರ ನೇತ್ರತ್ವದಲ್ಲಿ ಒಂದು ಬಸ್ಸನ್ನು ತಡೆದು ನಿಲ್ಲಿಸಿ ಬೆಂಕಿಯನ್ನು ಹಚ್ಚಿರುವ ಘಟನೆ ನಡೆದಿದೆ. ಬಹುಶಃ ವಿಧಾನಸಭೆ ಬೆಳಗಾವಿಯಲ್ಲಿ ನಡೆಯುತ್ತಿರಬೇಕಾದ ಈ ಸಂದರ್ಭದಲ್ಲಿ ಬೆಳಗಾವಿಯಲ್ಲಿ ಕೂಡ ಮರಾಠಿಗರು ಹೆಚ್ಚಿನ ಸಂಖ್ಯೆಯಲ್ಲಿ ವಾಸ ಮಾಡುತ್ತಿದ್ದಾರೆ. ವಿಧಾನಸಭೆ ನಡೆಯಬೇಕಾದ ಸಮಯದಲ್ಲಿ ಮರಾಠಾ ಮಹಾಮೇಳಕ್ಕೆ ಅನುಮತಿಯನ್ನು ನಿರಾಕರಿಸಿದರು ಎನ್ನುವ ಒಂದು ಕಾರಣಕ್ಕೋಸ್ಕರ ಮತ್ತು ಪೊಲೀಸ್

ಬಂದೋಬಸ್ತಿನ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ಯಾವುದೇ ಒಂದು ಅಹಿತಕರವಾದಂಥ ಘಟನೆಗಳಿಗೆ ಇಳಿಯದೆ ಇವತ್ತು ವಿಧಾನಸಭೆ ಅಧಿವೇಶನ ನಡೆಯುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆದರೆ ವಿಧಾನಸಭೆ ಪ್ರಾರಂಭವಾಗಿ ಎರಡು ದಿವಸ ಆದ ಮೇಲೆ ನಮ್ಮ ಗಡಿಭಾಗದ ಹೊರಗಿನ ಹಳ್ಳಿಗಳಲ್ಲಿ ಈ ರೀತಿಯಾದಂಥ ಘಟನೆ ನಡೆದಿದೆ ಎನ್ನತಕ್ಕಂಥದ್ದು ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದು ತಮ್ಮ ಹೇಳಿಕೆಯ ಪ್ರತಿಕ್ರಿಯೆಯನ್ನು ಕೂಡ ನಾನು ನೋಡಿದ್ದೇನೆ. ಬಹುಶಃ ಇದು ಸೂಕ್ಷ್ಮವಾದಂಥ ವಿಚಾರ. ಇದನ್ನು ಯಾವ ಹಂತದಲ್ಲಿ ಬಗೆಹರಿಸಬಹುದು ಎಂದು ತಾವು ಚಿಂತನೆ ಮಾಡಬೇಕು. ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ವಿಧಾನಸಭೆ ಪ್ರಾರಂಭವಾಗುವುದಕ್ಕೆ ಮುಂಚೆ ಇದು ಸರ್ಕಾರಕ್ಕೆ ತಿಳಿದಂಥ ವಿಚಾರ ಕೂಡ. ಕಾರಣ ಹೋದ ವರ್ಷ ಇದೇ ರೀತಿಯ ಒಂದು ಮಹಾಮೇಳ ನಡೆಯುವುದಕ್ಕೆ ಗೊಂದಲ ಆಗಿರತಕ್ಕಂಥದ್ದು. ಮತ್ತು ಅನೇಕ ಪತ್ರಿಕೆಗಳು ಮತ್ತು ಸಂಘಸಂಸ್ಥೆಗಳು ಕೂಡ ಮಹಾಮೇಳ ನಡೆದರು ನಡೆಯಲಿ ಏನಾಗುತ್ತದೆ ನೋಡೋಣ ಎನ್ನತಕ್ಕಂಥ ರೀತಿಯಲ್ಲಿ ಮಾತನಾಡಿರುವುದನ್ನು ನಾವು ಕೆಲವು ಪತ್ರಿಕೆಗಳಲ್ಲಿ ನೋಡಿದ್ದೇವೆ. ನಾವು ಇಲ್ಲಿ ಬರುವುದಕ್ಕೆ ಮುಂಚೆ ಕೆಲವು ಪತ್ರಿಕೆಗಳಲ್ಲಿ ಬಂದಿರುವ ಮಾಹಿತಿ ಕೂಡ ನಮಗೆ ಇತ್ತು. ಒಂದು ದೃಷ್ಟಿಯಿಂದ ಅದನ್ನು ವ್ಯವಸ್ಥಿತವಾಗಿ ಮಾಡುವುದಕ್ಕೆ ಹೊರಟರೆ ಇನ್ನೊಂದು ರೀತಿಯಾದಂಥ ಪರಿಣಾಮವನ್ನು ಇವತ್ತು ನಾವು ಕನ್ನಡಿಗರು ಎದುರಿಸಬೇಕಾಗಿದೆ. ಆದರೆ ಅದು ಇಲ್ಲಿಗೆ ಸಮಾಪ್ತಿಯಾಗಬೇಕು. ಅದು ಮುಂದುವರಿಯದೇ ಇರತಕ್ಕಂಥ ರೀತಿಯಲ್ಲಿ ತಾವು ಯಾವ ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೀರಿ ಎನ್ನತಕ್ಕಂಥದ್ದು. ಕಾರಣವೇನೆಂದರೆ, ಶಿವಸೇನೆಗೂ ತಮಗೂ ಕೂಡ ನಿಕಟವಾದ ಬಾಂಧವ್ಯ ಇರತಕ್ಕಂಥ ಈ ಸಂದರ್ಭದಲ್ಲಿ ತಾವು ರಾಜಕೀಯವಾಗಿ ಇರತಕ್ಕಂಥ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಿ ಸರಿಪಡಿಸಬೇಕು.

ಇದನ್ನು ಸರಿಪಡಿಸುವುದರ ಬಗ್ಗೆ ಎಲ್ಲೋ ಒಂದು ರೀತಿಯಲ್ಲಿ ಗಡಿಭಾಗದಲ್ಲಿ ಆತಂಕಗಳು ಆಗಿವೆ, ಗೊಂದಲಗಳು ಆಗಿವೆ ಅಲ್ಲಿ ಜನರ ಮನಸ್ಸು ಕದಡಿಹೋಗಿದೆ. ಶಾಂತಿ ಇಲ್ಲವೇನೋ ಎಂಬ ಭಾವನೆ ಬರತಕ್ಕಂತಹ ರೀತಿಯಲ್ಲಿ ಘಟನೆಗಳು ಆಗಿವೆ, ಅದನ್ನು ಯಾವ ರೀತಿಯಾಗಿ ನಿರ್ವಹಿಸುತ್ತೀರಿ ಅದನ್ನು ಸರ್ಕಾರಕ್ಕೆ ಬಿಡುತ್ತೇನೆ. ಬಹುಶ: ಇಂತಹ ಘಟನೆಗಳು ಆಗಬಾರದು ಮತ್ತು ಮರುಕಳಿಸಬಾರದು. ಇಲ್ಲಿ ವಾಸ ಮಾಡುತ್ತಿರುವಂತಹ ಕನ್ನಡಿಗರು ಮತ್ತು ಮರಾಠಿಗರು ಒಂದೇ ತಾಯಿಯ

ಮಕ್ಕಳಂತೆ ಇವತ್ತು ವಾಸ ಮಾಡುತ್ತಿದ್ದಾರೆ. ಇವತ್ತು ಈ ರಾಜ್ಯದಲ್ಲಿ ಮರಾಠಿಗರು ಎಲ್ಲಿಯ ವರೆಗೆ ಹೋಗಿದ್ದಾರೆಂದರೆ ಮೊನ್ನೆ ನಡೆದಂತಹ ವಿಧಾನಸಭಾ ಚುನಾವಣೆಯಲ್ಲಿ ಇಂತಹ ಭಾವನಾತ್ಮಕ ವಿಚಾರವನ್ನು ಮುಂದಿಟ್ಟಾಗಲೂ ಕೂಡ ಒಂದು ಸೀಟನ್ನು ಕೂಡ ಗೆಲ್ಲಿಸತಕ್ಕಂತಹ ಗೋಜಿಗೆ ಹೋಗದೆಯೇ ನಮ್ಮ ಕರ್ನಾಟಕದ ಅಭಿವೃದ್ಧಿಯ ಜೊತೆಗೆ ಕರ್ನಾಟಕದ ಜನತೆಯ ಜೊತೆಯಲ್ಲಿದ್ದಾರೆಂದು ನಾನು ಭಾವನೆ ಮಾಡಿದ್ದೇನೆ. ಆದರೆ ಇವತ್ತು ಪರ ರಾಜ್ಯದಲ್ಲಿರುವಂತಹ ಶಿವಸೇನೆಯವರು ಈ ರೀತಿಯಾಗಿ ಕಾಲು ಕೆರೆದು ಜಗಳ ಮಾಡುತ್ತಿರುವುದನ್ನು ನೋಡಿದರೆ ಇದಕ್ಕೆ ನಾವು ಎಲ್ಲೋ ಒಂದು ಕಡೆ ಒಂದು ಅಂತಿಮವಾದಂತಹ ತಹಬಂಧವನ್ನು ಮಾಡ ಬೇಕಾಗುತ್ತದೆಂಬ ಮಾತನ್ನು ಹೇಳುತ್ತೇನೆ. ಇವತ್ತು ಅವರು ಮಾಡಿರುವಂತಹದ್ದು ಕೇವಲ ನಮ್ಮ ಬಸ್ಸನ್ನು ಸುಟ್ಟಿರುವುದು ಮಾತ್ರವಲ್ಲ ಅದು ಕನ್ನಡಿಗರ ಮೇಲೆ ಆಗಿ ರುವಂತಹ ದೌರ್ಜನ್ಯ ಎಂದು ನಾವು ಪರಿಗಣಿಸಬೇಕಾಗುತ್ತದೆ. ಇಂತಹ ಘಟನೆಗಳು ಮತ್ತೆ ಮರುಕಳಿಸಬಾರದು. ಅದಕ್ಕೆ ರಾಜಕೀಯವಾಗಿ ಮತ್ತು ತಾತ್ವಿಕವಾಗಿ ಒಂದು ಎಚ್ಚರಿಕೆಯನ್ನು ಆ ಒಂದು ಸರ್ಕಾರಕ್ಕೆ ಕೊಡುತ್ತೀರೆಂಬ ಬಗ್ಗೆ ನಾನು ಉತ್ತರವನ್ನು ತಮ್ಮಿಂದ ನೇರವಾಗಿ ಬಯಸುತ್ತೇನೆ. ಇದರ ಬಗ್ಗೆ ವಿಸ್ತಾರವಾಗಿ ಮತ್ತೆ ಹೆಚ್ಚಿನ ಚರ್ಚೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಚರ್ಚೆಯನ್ನು ಮಾಡುವುದರಿಂದ ಅದು ಎಲ್ಲಿಂದಲೋ ಎಲ್ಲಿಗೆ ಹೋಗುತ್ತದೆ. ಅದು ಮಾಧ್ಯಮದಲ್ಲಿ ಬರುತ್ತದೆ. ಅಲ್ಲಿ ಶಾಂತಿಯನ್ನು ಕಾಪಾಡಬೇಕು ಮತ್ತು ಸಹಬಾಳ್ವೆಯಿಂದ ಇರಬೇಕು. ಮಹಾರಾಷ್ಟ್ರದಲ್ಲಿ ಕನ್ನಡಿಗರು ಹೆಚ್ಚಿಗೆ ಇದ್ದಾರೆ. ಮುಂಬೈಯಲ್ಲಿಯೂ ಕನ್ನಡಿಗರು ಹೆಚ್ಚು ಇದ್ದಾರೆ, ಅವರುಗಳ ಹಿತದೃಷ್ಟಿಯಿಂದ ನೀವು ಯಾವ ರೀತಿಯಾಗಿ ಕಾರ್ಯನಿರ್ವಹಿಸುತ್ತೀರೆಂಬ ಬಗ್ಗೆ ಸರ್ಕಾರದಿಂದ ನಾನು ಉತ್ತರವನ್ನು ಬಯಸುತ್ತೇನೆ.

ಶ್ರೀ ಆರ್. ಅಶೋಕ್ (ಮಾನ್ಯ ಸಾರಿಗೆ ಸಚಿವರು) :- ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ಅಂದರೆ 18.01.2009ರಂದು ಬೀದರ ವಿಭಾಗದ ಒಂದು ಬಸ್ಸು ಲಾತೂರಿಗೆ ಬೆಳಿಗ್ಗೆ 11.30 ಗಂಟೆಗೆ ಹೊರಟು ಅದು 3.00 ಗಂಟೆಗೆ ತಲುಪ ಬೇಕಾಗಿತ್ತು. ಆ ಬಸ್ಸಿನ ಸಂಖ್ಯೆ ಕೆಎ:38 ಎಫ್: 392 ಆ ವಾಹನವು ಸುಮಾರು 90ರಷ್ಟು ಸುಟ್ಟು ಹೋಗಿದೆ. ಇದರಿಂದ ಸುಮಾರು 10 ಲಕ್ಷ ರೂಪಾಯಿಗಳು ನಮ್ಮ ಸಾರಿಗೆ ಇಲಾಖೆಗೆ ಈ ಘಟನೆಯಿಂದ ಲಾಸ್ ಆಗಿದೆ. ಇದಾದ ತಕ್ಷಣ ಕೂಡಲೇ ನಾವು ಅಲ್ಲಿನ ಅಧಿಕಾರಿಗಳನ್ನು ಸಂಪರ್ಕ ಮಾಡಿ, ನಮ್ಮ ಅಧಿಕಾರಿಗಳು ಸಹ ಸ್ಥಳಕ್ಕೆ ಭೇಟಿ ನೀಡಿ compliant ಅನ್ನು lodge ಮಾಡಿದ್ದಾರೆ. ಆ ಅಧಿಕಾರಿಗಳ

ಜೊತೆ ನಮ್ಮ ಅಧಿಕಾರಿಗಳು ಸಂಪರ್ಕದಲ್ಲಿದ್ದಾರೆ. ಈಗಾಗಲೇ ಸೆಕ್ಷನ್ 307ರ ಪ್ರಕರಣದಡಿಯಲ್ಲಿ ಕೇಸು ದಾಖಲಾಗಿದೆ. ದಾವಾ ಎಂಬ ಸಂಘಟನೆಯ ಕಾರ್ಯಕರ್ತರು ಈ ಕೃತ್ಯ ಎಸಗಿದ್ದಾರೆಂದು ಪೊಲೀಸ್‌ನವರು ವರದಿ ಮಾಡಿದ್ದಾರೆ. ಇದಲ್ಲದೆ ಮತ್ತೆರಡು ಬಸ್ಸುಗಳಿಗೆ ಕಲ್ಲು ತೂರಾಟ ನಡೆದಿವೆ. ಉದಯಗಿರಿ ಮತ್ತು ಭಾಲ್ಕಿ, ಔರಾದ್‌ನ ಎರಡು ಡಿಪೋಗಳಿಂದ ಹೊರಟ ಬಸ್ಸುಗಳ ಗ್ಲಾಸುಗಳನ್ನು ಒಡೆದುಹಾಕಿದ್ದಾರೆ. ಈಗಾಗಲೇ ಕಮಲಾಪುರ ಪೊಲೀಸ್ ಠಾಣೆಯಲ್ಲಿ ನಮ್ಮ ಅಧಿಕಾರಿಗಳು ಈ ಬಗ್ಗೆ ಕೇಸನ್ನು ದಾಖಲು ಮಾಡಿ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ನಾವು ಕೂಡ ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ನಿರಂತರವಾಗಿ ಸಂಪರ್ಕವನ್ನು ಇಟ್ಟುಕೊಂಡಿದ್ದೇವೆ. ಮುಂದೆ ಈ ರೀತಿಯಾಗಿ ಘಟನೆಗಳು ಆಗದ ಹಾಗೆ ನಮ್ಮ ಸಾರಿಗೆ ಬಸ್ಸುಗಳಿಗೆ ರಕ್ಷಣೆಯ ವ್ಯವಸ್ಥೆಯನ್ನು ಮಾಡಬೇಕೆಂದು ಸಹ ಹೇಳಿದ್ದಾರೆ. ಅಲ್ಲಿಯ ಇಲಾಖಾಧಿಕಾರಿಗಳು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಒಪ್ಪಿಕೊಂಡಿದ್ದಾರೆ. ಪ್ರತಿಯೊಂದು ಬಸ್ಸು ಬರತಕ್ಕಂತಹ ಸಂದರ್ಭದಲ್ಲಿ ಪ್ರತಿನಿತ್ಯ ಎಷ್ಟು ಬಸ್ಸುಗಳು ಬರುತ್ತವೆ ಅದಕ್ಕೆ ಏನೇನು ವ್ಯವಸ್ಥೆ ಹಾಗೂ ರಕ್ಷಣೆಯನ್ನು ಕೊಡಬೇಕಾಗಿದೆ ಅದಕ್ಕೆ ನಾವು ಸಿದ್ದರಿದ್ದೇವೆಂಬ ಮಾತನ್ನು ಹೇಳಿದ್ದಾರೆ. ಅದೇ ರೀತಿಯಾಗಿ ಕರ್ನಾಟಕದ ಒಳಗಡೆ ಬರತಕ್ಕಂತಹ ಮಹಾರಾಷ್ಟ್ರದ ಪ್ರಯಾಣಿಕರು ಏನಿದ್ದಾರೆ ಅದರಲ್ಲಿ ನಮ್ಮ ಕನ್ನಡಿಗರು ಇರಬಹುದು, ಮಹಾರಾಷ್ಟ್ರದವರು ಇರಬಹುದು, ಬಸ್ಸಿನಲ್ಲಿ ಪ್ರಯಾಣ ಮಾಡುವವರು ಇಂತಹ ಭಾಷೆಯವರು ಎಂದು ಏನಿಲ್ಲ, ಮಹಾರಾಷ್ಟ್ರದಲ್ಲಿ ಕಿಡಿಗೇಡಿಗಳು ಏನು ಕೃತ್ಯ ಮಾಡಿದ್ದಾರೆ ಇದು ಖಂಡನೀಯ. ಇದನ್ನು ಯಾರೂ ಕೂಡ ಕ್ಷಮಿಸುವಂತಹ ಮಾತಿಲ್ಲ. ಮಹಾರಾಷ್ಟ್ರ ಸರ್ಕಾರವು ಇದರ ಮೇಲೆ ಹೆಚ್ಚಿನ ಒತ್ತನ್ನು ಕೊಟ್ಟು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಂತಹ ಉದ್ವಿಗ್ನ ಪರಿಸ್ಥಿತಿಯು ಕಳೆದ ಎರಡು ದಿನಗಳಿಂದ ಇದೆ. ಅಲ್ಲಿಯ ಕೆಲವು ಶಾಸಕರುಗಳು ಇಲ್ಲಿಗೆ ಬಂದು ಭಾಷಣವನ್ನು ಮಾಡಿ ಹೋಗಿದ್ದಾರೆ. ಈ ದೃಷಿಯನ್ನು ಅರಿತೆ ಅಲ್ಲಿಯ ಸರ್ಕಾರವು ಈ ಬಗ್ಗೆ ಮುಂಜಾಗ್ರತೆಯ ಕ್ರಮವನ್ನು ತೆಗೆದುಕೊಳ್ಳ ಬೇಕಾಗಿತ್ತು. ನಿನ್ನೆ ದಿನ ನಮ್ಮ ಸರ್ಕಾರವು ಅಲ್ಲಿಯ ಮಹಾರಾಷ್ಟ್ರ ಸರ್ಕಾರದ ಬಸ್ಸುಗಳಿಗೆ ಮುಂಜಾಗ್ರತೆಯ ಕ್ರಮವಾಗಿ ಏನು ರಕ್ಷಣೆಯನ್ನು ಕೊಡಬೇಕಾಗಿತ್ತು ಅದನ್ನು ನಾವು ಕೊಟ್ಟಿದ್ದೇವೆ. ಈಗಾಗಲೇ ಅಲ್ಲಿಯ ಸರ್ಕಾರದ ಎರಡು ಬಸ್ಸುಗಳು ಕಿಡಿಗೇಡಿಗಳ ಕೃತ್ಯಕ್ಕೆ ಸಿಕ್ಕಿದ್ದರೂ ಸಹ ಅದನ್ನು ನಾವು ಅಲ್ಲಿಂದ ತಪ್ಪಿಸಿ ನಮ್ಮ ಬಸ್ಸ್ ಡಿಪೋಗೆ ತಂದು ಸೂಕ್ತವಾದಂತಹ ರಕ್ಷಣೆಯನ್ನು ಕೊಟ್ಟಿದ್ದೇವೆ. ನಾವು ಈ ರೀತಿಯಾಗಿ

ತಮ್ಮ ಬಸ್ಸುಗಳಿಗೆ ರಕ್ಷಣೆಯನ್ನು ಕೊಟ್ಟಿದ್ದೇವೆಂಬ ಬಗ್ಗೆ information ಅನ್ನು ಕೊಟ್ಟಿದ್ದೇವೆ. ನಿಮ್ಮ ಬಸ್ಸುಗಳನ್ನು ಸರಾಗವಾಗಿ ನಿಮ್ಮ ರಾಜ್ಯಕ್ಕೆ ತೆಗೆದುಕೊಂಡು ಹೋಗಬಹುದು ಎಂಬ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದೇವೆ. ಇದೇ ರೀತಿಯಾದ ಸಹಕಾರವನ್ನು ನಾವು ಮಹಾರಾಷ್ಟ್ರ ಸರ್ಕಾರದವರಿಂದಲೂ ಬಯಸಿದ್ದೇವೆ. ಈಗಾಗಲೇ ನಮ್ಮ ಅಧಿಕಾರಿಗಳು ಅವರ ಜೊತೆಯಲ್ಲಿ touch ನಲ್ಲಿದ್ದಾರೆ. ಇವತ್ತು ಸ್ವಲ್ಪ ಉದ್ವಿಗ್ನ ಪರಿಸ್ಥಿತಿ ಇರುವುದರಿಂದ ಎರಡು ರಾಜ್ಯಗಳ ಬಸ್ಸುಗಳನ್ನು ಬಿಟ್ಟಿರುವುದಿಲ್ಲ. ಮಹಾರಾಷ್ಟ್ರ ಸರ್ಕಾರದವರು ನಿನ್ನೆಯೇ ಬಸ್ಸನ್ನು stop ಮಾಡಿದ್ದಾರೆ. ಇವತ್ತು ಬೆಳಿಗ್ಗೆಯಿಂದ ನಾವು ಮಧ್ಯಾಹ್ನ ಮತ್ತು ಸಂಜೆಯವರೆಗೆ ಈ ವಾತಾವರಣವು ತಿಳಿಯಾಗುವವರೆಗೆ ಬಸ್ಸ್ ಬಿಡುವುದನ್ನು stop ಮಾಡುವಂತಹ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದಷ್ಟು ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆಗಳು ನಡೆದಿದೆ. ವಾತಾವರಣವು ತಿಳಿಯಾಗಿದೆ, ಆದಷ್ಟು ಶೀಘ್ರವಾಗಿ ಒಂದು ಸೌಹಾರ್ದ ವಾತಾವರಣವು ಮೂಡುತ್ತದೆ. ಇದಾದ ತಕ್ಷಣ ನಾವು ಬಸ್ಸುಗಳನ್ನು ಓಡಿಸುವ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಈಗಾಗಲೇ ಯಾರೂ ನಮ್ಮ ಬಸ್ಸನ್ನು ಸುಟ್ಟಿದ್ದಾರೆ. ಅವರ ಮೇಲೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಈ ರೀತಿಯಾದ ಘಟನೆಗಳು ಆಗಬಾರದು ಎಂದು ಮಹಾರಾಷ್ಟ್ರ ಸರ್ಕಾರಕ್ಕೆ ನಮ್ಮ ವಿನಂತಿಯನ್ನು ತಿಳಿಸಿದ್ದೇವೆ.

ಡಾ॥ ಬಿ.ಎಸ್. ಯಡಿಯೂರಪ್ಪ (ಮಾನ್ಯಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ವಿಧಾನಮಂಡಲದ ಈ ಐತಿಹಾಸಿಕ ಅಧಿವೇಶನ ಬೆಳಗಾವಿಯಲ್ಲಿ ನಡೆಯುವಂತಹ ಕಾಲದಲ್ಲಿ ಈ ಮಹಾಮೇಳ ಮಾಡುವುದರಿಂದ ಗೊಂದಲದ ವಾತಾವರಣವು ಉಂಟಾಗಬಹುದೆನ್ನುವಂತಹ ಒಂದೇ ಒಂದು ಕಾರಣಕ್ಕಾಗಿ ಇಲ್ಲಿಯ ಜಿಲ್ಲಾಡಳಿತವು ಅದಕ್ಕೆ ಅವಕಾಶವನ್ನು ಕೊಡಲಿಲ್ಲ. ತಾವುಗಳು ಬೇರೆ ಸಂದರ್ಭದಲ್ಲಿ ಮಹಾಮೇಳವನ್ನು ನಡೆಸುವುದಕ್ಕೆ ಯಾವುದೇ ಅಡ್ಡಿ ಆತಂಕಗಳು ಇಲ್ಲ. ಕನ್ನಡಿಗರು ಶಾಂತಿ ಪ್ರಿಯರಿದ್ದಾರೆ. ಈ ರಾಜ್ಯದಲ್ಲಿ ವಾಸ ಮಾಡುವಂತಹ ಎಲ್ಲಾ ಭಾಷೆಯ ಬಂಧುಗಳ ಜೊತೆಗೆ ಸೌಹಾರ್ದಯುತವಾದಂತಹ ಒಂದು ಸಂಬಂಧಗಳನ್ನು ಇಟ್ಟುಕೊಂಡಿದ್ದಾರೆ. ಈ ವಾತಾವರಣವು ಶಾಂತಿಯುತವಾಗಿರುವುದನ್ನು ಸಹಿಸದೆ ಕೆಲವರು ಈ ರೀತಿಯಾದ ಘಟನೆಗಳಿಗೆ ಕಾರಣಕರ್ತರಾಗಿದ್ದಾರೆ. ಇದನ್ನು ನಾವು ಮತ್ತೇ ಮತ್ತೇ ಹೇಳುವಂತಹ ಅಗತ್ಯವಿಲ್ಲ. ಈ ನಾಡಿನ ನೆಲ,ಜಲ,ಭಾಷೆಯ ಪ್ರಶ್ನೆಗಳು ಬಂದಾಗ ನಾವೆಲ್ಲರೂ ಒಕ್ಕೊರಲಿನಿಂದ ಒಗ್ಗಟ್ಟಾಗಿದ್ದೇವೆ ಮತ್ತು

ಒಂದಾಗಿದ್ದೇವೆ. ನಾವುಗಳು ಯಾವುದೇ ಕಾರಣಕ್ಕೂ ಸಹ ಇಲ್ಲಿ ಒಂದಿಂಚು ಭೂಮಿಯನ್ನು ಬಿಟ್ಟು ಕೊಡುವಂತಹ ಪ್ರಶ್ನೆ ಬರುವುದಿಲ್ಲ. ಇದರ ಬಗ್ಗೆ ಮತ್ತೇ ಮತ್ತೇ ಚರ್ಚೆ ಮಾಡುವಂತಹ ಅಗತ್ಯವು ಸಹ ಇಲ್ಲ . ರಾಜಕೀಯ ಕಾರಣಕ್ಕಾಗಿ ಮತ್ತೇ ಮತ್ತೇ ಮಹಾಜನ್ ಆಯೋಗದ ವರದಿ ಬಂದ ಮೇಲೆ ಅದನ್ನು ನಾವುಗಳು ಒಪ್ಪಿಕೊಂಡ ಮೇಲೆ ಮತ್ತೇ ಮತ್ತೇ ಇದರ ಬಗ್ಗೆ ಪ್ರಸ್ತಾಪ ಆಗುವುದು ಬೇಡ. ಇದರ ಬಗ್ಗೆ ಕೇಂದ್ರ ಸರ್ಕಾರವು ಸೂಕ್ತವಾದ ನಿರ್ದೇಶನವನ್ನು ಬೇರೆ ರಾಜ್ಯಗಳಿಗೂ ಸಹ ಕೊಡಬೇಕಾಗುತ್ತದೆ. ಹಾಗಾಗಿ ಇಂತಹ ಸಣ್ಣ ಪುಟ್ಟ ಘಟನೆಗಳಿಂದ ಸುಮಧುರ ಬಾಂದವ್ಯಗಳಿಗೆ ಅಡ್ಡಿಯಾಗುತ್ತದೆ. ಅದು ತೆಲಗು ಭಾಷಿಕ ಇರಲಿ, ಅದು ಮರಾಠಿ ಇರಲಿ, ಯಾವುದೇ ಭಾಷಿಕರು ಇರಲಿ, ನಾವೆಲ್ಲರೂ ಒಟ್ಟಾಗಿದ್ದೇವೆ. ಈ ವಾತಾವರಣಕ್ಕೆ ಹೊಂದಿಕೊಂಡು ಹೋಗಬೇಕು, ನಿನ್ನೆಯ ದಿನ ನಮ್ಮ ಗೃಹ ಸಚಿವರು ಅಲ್ಲಿಯ ಗೃಹಸಚಿವರುಗಳ ಜೊತೆಯಲ್ಲಿ ಮಾತನಾಡಿದ್ದಾರೆ. ಅವರು ಸಹ ಈ ಘಟನೆಯ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ನಾನು ನಮ್ಮ ಕನ್ನಡ ನಾಡಿನ ಬಂಧುಗಳಲ್ಲಿ ವಿನಂತಿಯನ್ನು ಮಾಡುತ್ತೇನೆ. ಶಾಂತಿ ಸುವ್ಯವಸ್ಥೆಯನ್ನು ತಾವುಗಳು ಕಾಪಾಡಿಕೊಳ್ಳಿ, ಮರಾಠಿ ಬಂಧುಗಳು ಸಹ ಇಲ್ಲಿ ಇಷ್ಟೊಂದು ಒಳ್ಳೆಯ ರೀತಿಯಲ್ಲಿ ಒಟ್ಟಾಗಿ ಬಾಳಿ ಬದುಕುತ್ತಿದ್ದಾರೆ. ಸಣ್ಣಪುಟ್ಟ ಘಟನೆಗಳೆ ಅಲ್ಲದೆ ಬೇರೆ ರೀತಿಯ ಘಟನೆಗಳಿಗೆ ಅವಕಾಶವಾಗದ ರೀತಿಯಲ್ಲಿ ಅವರು ಎಚ್ಚರವನ್ನು ವಹಿಸಿ ಸಹಕರಿಸಿದರೆ ಸಾಕು. ನಮ್ಮಲ್ಲಿ ಸುಮಧುರವಾದ ವಾತಾವರಣವಿದೆ, ನಾವುಗಳು ಯಾವುದೇ ರೀತಿಯಾದ ಬೇಧಭಾವನೆಯನ್ನು ಮಾಡುತ್ತಿಲ್ಲ. ಸರ್ಕಾರಿ ಆಡಳಿತವನ್ನು ನಡೆಸುವಂತಹ ಕಾಲದಲ್ಲಿ ಯಾವುದೇ ಭಾಷೆ ಬಂಧುಗಳಿಗೆ ಅನ್ಯಾಯ ಮಾಡುವಂತಹದ್ದು ಮತ್ತು ವ್ಯತ್ಯಾಸವನ್ನು ಮಾಡುವಂತಹದ್ದು ಅಗಬಾರದು. ಆ ತರಹದ ಒಂದು ಘಟನೆಗಳು ಇಲ್ಲದೆಯೇ ನಾವೆಲ್ಲರೂ ಒಟ್ಟಾಗಿ ಬಾಳುತ್ತಿರಬೇಕಾದರೆ ಈ ರೀತಿಯ ಘಟನಾವಳಿಗಳು ಮತ್ತೆ ಮರುಕಳುಹಿಸದಂತೆ ಕಟ್ಟೇಚ್ಚರವನ್ನು ಮಹಾರಾಷ್ಟ್ರ ಸರ್ಕಾರದವರು ವಹಿಸ ಬೇಕಾಗುತ್ತದೆ. ಅಗತ್ಯಬಿದ್ದರೆ ಮತ್ತೊಮ್ಮೆ ಮಾನ್ಯ ಪ್ರಧಾನಮಂತ್ರಿಯವರು ಅವರನ್ನು ಕರೆದು ಇಂತಹ ಘಟನಾವಳಿಗಳಿಗೆ ಅವಕಾಶವನ್ನು ಕೊಡಬೇಡಿ. ಶಾಂತಿ ವಾತಾವರಣವನ್ನು ಕದಡಬೇಡಿ ಎಂದು ಹೇಳಿ ಅವರಿಗೆ ಸರಿಯಾದಂತಹ ಮಾರ್ಗದರ್ಶನವನ್ನು ಮಾಡಬೇಕೆಂಬ ವಿನಂತಿಯನ್ನು ಮಾಡುತ್ತೇನೆ. ಈಗಾಗಲೇ ಈ ರಾಜ್ಯದಲ್ಲಿ ವಾತಾವರಣವು ತುಂಬಾ ಚೆನ್ನಾಗಿದೆ. ನಿನ್ನೆ ನಮ್ಮ ಸಚಿವರು ಈಗಾಗಲೇ ಇದರ ಬಗ್ಗೆ ಮಾನ್ಯ ಸಾರಿಗೆ ಸಚಿವರಾದ ಶ್ರೀ ಅಶೋಕ್‌ರವರು statement ಮಾಡಿದ್ದಾರೆ. ಅಲ್ಲಿ ಏನು ಘಟನಾವಳಿಗಳು ಅಯಿತು. ನಾವು

ಇಂತಹ ಘಟನೆಗಳ ಬಗ್ಗೆ ಎಚ್ಚರಿಕೆಯನ್ನು ವಹಿಸಿದ್ದೇವೆ. ಮಹಾರಾಷ್ಟ್ರದಿಂದ ಬರುವಂತಹ ಬಸ್ಸುಗಳಿಗೆ ಯಾವುದೇ ಅಡ್ಡಿಆತಂಕಗಳು ಆಗದಂತೆ ನೋಡಿಕೊಂಡಿದ್ದೇವೆ.ಎಲ್ಲರೂ ಸಹ ಸಹಕರಿಸಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಸಭಾನಾಯಕರು ಒಂದು ಮಾತನ್ನು ಹೇಳಿದರು. ಕೇಂದ್ರ ಮಧ್ಯದಲ್ಲಿ ಪ್ರವೇಶ ಮಾಡಬೇಕೆಂಬ ಮಾತನ್ನು ಹೇಳಿದರು. ಅವರಿಗೆ ಮಾರ್ಗದರ್ಶನ ಕೊಡಬೇಕೆಂದು ಹೇಳಿದ್ದಾರೆ. ಆ ತರಹ ಏನಾದರೂ ಪ್ರಧಾನಮಂತ್ರಿಗಳನ್ನು ಮಧ್ಯ ಪ್ರವೇಶ ಮಾಡುವಂತಹ ಮತ್ತು ಕೇಳತಕ್ಕಂತಹ ಮನಸ್ಸು ಏನಾದರೂ ನಿಮಗೆ ಇದೆಯೇ? ಅದನ್ನು ಕೇಳತಕ್ಕಂತಹ ಅವಶ್ಯಕತೆ ಇದೆಯೇ?

ಡಾ॥ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) :- ಮಹಾಜನ್ ಆಯೋಗದ ವರದಿಯನ್ನು ಎಲ್ಲರೂ ಒಪ್ಪಿಕೊಂಡ ಮೇಲೆ ಅದನ್ನು ಜಾರಿಗೆ ಬರುವಂತೆ ಅದಕ್ಕೆ ಅಡ್ಡಿ ಆತಂಕಗಳನ್ನು ಯಾವುದೇ ರಾಜ್ಯದವರು ಮಾಡದೇ ಇರುವಂತಹದ್ದನ್ನು ನೋಡಬೇಕಾಗಿರುವುದು ಕೇಂದ್ರ ಸರ್ಕಾರ. ಅದಕ್ಕಾಗಿ ನಾನು ಮನವಿಯನ್ನು ಮಾಡುತ್ತಿದ್ದೇನೆ. ಮಹಾರಾಷ್ಟ್ರದ ಪ್ರಮುಖರ ಜೊತೆ ಮತ್ತು ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡಿ ಮತ್ತೇ ಮತ್ತೇ ಈ ವಿಷಯದ ಬಗ್ಗೆ ಕೆದಕುವುದು ಬೇಡ. ದೇಶ ಒಗ್ಗಟಾಗಿ ಒಂದಾಗಿ ಹೋಗಬೇಕಾಗಿದೆ. ನಾವೆಲ್ಲರೂ ಒಟ್ಟಾಗಿ ಸೇರಿ ಎದುರಿಸಬೇಕಾದ ಸಮಸ್ಯೆಗಳೇ ಬೇರೆ ಇದೆ. ಆದ್ದರಿಂದ ನಾವೆಲ್ಲರೂ ಒಂದೇ ತಾಯಿಯ ಮಕ್ಕಳಂತೆ ಇದ್ದು ಮೊದಲು ನಾವೆಲ್ಲರೂ ಭಾರತೀಯರೆಂದು ತಿಳಿದುಕೊಂಡು ಒಟ್ಟಾಗಿ ಹೋಗಬೇಕಾಗಿದೆ. ಈ ದಿಕ್ಕಿನಲ್ಲಿ ಮಾನ್ಯ ಪ್ರಧಾನಿಯರು ಮಹಾರಾಷ್ಟ್ರ ಸರ್ಕಾರಕ್ಕೆ ಮಾರ್ಗದರ್ಶನ ಮಾಡುವುದು ಒಳ್ಳೆಯದು ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಮಾನ್ಯ ಅಧ್ಯಕ್ಷರೇ,..

ಅಧ್ಯಕ್ಷರು :- ಸಂಗಣ್ಣನವರೇ ನೀವು ಯಾವ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೀರಿ. ಶೂನ್ಯವೇಳೆಯಲ್ಲಿ ಕೇಳುತ್ತಿರುವಿರಾ ? ಏನಾದರೂ ಹೇಳ ಬೇಕಾಗುತ್ತದೆ... ಈಗ ಒಬ್ಬರು ಕೇಳುತ್ತಾರೆ, ನಿಮಗೇನಾದರೂ ವಿಷಯ ಪ್ರಸ್ತಾಪ ಮಾಡುವುದಿದ್ದರೆ ನಂತರ ನೀವು ಕಳುಹಿಸಿಕೊಡಿ. ನೀವು ಈ ರೀತಿ ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಕರ್ನಾಟಕದ ಬಗ್ಗೆ ಮಾತನಾಡುತ್ತಿದ್ದೇವೆ.

ಅಧ್ಯಕ್ಷರು :- ನೀವು ಮಾತನಾಡಿ. ಬೇಡವೆನ್ನುವುದಿಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಕರ್ನಾಟಕದ ಬಗ್ಗೆ ನಾವು ಮಾತನಾಡುವುದು. ಈ ಒಕ್ಕೂಟದ ವ್ಯವಸ್ಥೆಯಲ್ಲಿ ಕೇಂದ್ರಸರ್ಕಾರವನ್ನು ಮಾನ್ಯ ಮುಖ್ಯಮಂತ್ರಿಗಳು ಹೋಗಿ ಸಂಪರ್ಕ ಮಾಡಿ ಎನ್ನುವುದು ನಮ್ಮ ಒತ್ತಾಯ. ಕರ್ನಾಟಕದ ಬೆಳಗಾವಿಯಲ್ಲಿ ನಾವು ವಿಧಾನಸಭೆ ನಡೆಸುವುದು ನ್ಯಾಯ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಲಿ ಎಂದು ಕೇಳುತ್ತಿದ್ದೇನೆ.

ಸಭಾಧ್ಯಕ್ಷರು :- ಜಯಚಂದ್ರರವರೇ ಮಾತನಾಡಿ.

6. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.

ವಿಷಯ :- ರಾಜ್ಯದಲ್ಲಿ ಕಾನೂನು ಬಾಹಿರವಾಗಿ ನಡೆದಿರುವ ಗಣಿಗಾರಿಕೆ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಸಭಾಧ್ಯಕ್ಷರೇ, ನಾನು ತಮ್ಮ ಅನುಮತಿಯನ್ನು ಕೋರಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಬಹುಶ: ಆ ನಿಲುವಳಿ ಸೂಚನೆ ಬಹಳ ಪ್ರಾಮುಖ್ಯವಾಗಿರುವಂಥ ವಿಚಾರ. ಅದು ಸಾರ್ವಜನಿಕವಾಗಿ ಅತ್ಯಂತ ಮಹತ್ವವುಳ್ಳವಾದ ನಿರ್ದಿಷ್ಟವಾಗಿರುವಂಥ ವಿಚಾರ. ನಾವು ಆ ವಿಚಾರವನ್ನು ಪ್ರಸ್ತಾಪ ಮಾಡತಕ್ಕಂಥ ಅನಿವಾರ್ಯತೆ ಇವತ್ತು ಇದೆ. ವಿಧಾನಸಭೆ ಪ್ರಾರಂಭವಾದ ದಿನಗಳಲ್ಲಿ ಅದರ ಅವಶ್ಯಕತೆ ಏನು ಎನ್ನುವುದಕ್ಕೆ ಬೆಳಿಗ್ಗೆ ಪತ್ರಿಕೆಯಲ್ಲಿ, ಟಿ.ವಿ. ಮಾಧ್ಯಮದಲ್ಲಿ ನೋಡಿದರೆ ಗೊತ್ತಾಗುತ್ತದೆ. ರೇಷನ್ ಕಾರ್ಡ್‌ಗಳಿಗೋಸ್ಕರ ಜನ ಮುಗಿಲು ಬಿದ್ದು ಬ್ಯಾಂಕುಗಳ ಮುಂದೆ, ನೆಮ್ಮದಿಯ ಕೇಂದ್ರಗಳ ಮುಂದೆ, ತಾಲ್ಲೂಕು ಆಫೀಸ್‌ಗಳ ಮುಂದೆ ಇಡೀ ತಾಲ್ಲೂಕಿನ ಜನ ಹೋಗಿ ನಿಂತಿರತಕ್ಕಂಥ ದೃಶ್ಯ ಒಂದು ಕಡೆಯಾದರೆ, ಇನ್ನೊಂದು ಕಡೆ ಕರ್ನಾಟಕದ ಒಂದು ಭಾಗವಾಗಿರುವ ಬಳ್ಳಾರಿ ಜಿಲ್ಲೆಯಲ್ಲಿ ಏನನ್ನು ನಾವು ನೋಡಬಹುದು ಎಂದು ಹೇಳಿದರೆ ನಿರಂತರವಾಗಿ ಹೆಲಿಕ್ಯಾಪ್ಟರ್‌ಗಳು ಹಾರಾಡುತ್ತಿರುವ ದೃಶ್ಯವನ್ನು ನಾವು ನೋಡಬಹುದು.